ಮಾಡಲು ತೊಂದರೆಯಾಗಿರುವುದು ಹಾಗೂ ಸಾರ್ವಜನಿಕರಿಗೆ ದೀಪವು ಮಂಕಾಗಿ ಪ್ರಕಾಶದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶದ ವೋಲ್ಟೇಜ್ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್‌ಷೆಡ್ಡಿಂಗನ್ನು ನಿರ್ವಹಿಸುತ್ತಿರುವಂತೆ, ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲೂ ಸಹಾ ನಿಯಮಿತ ಲೋಡ್‌ಷೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ.

ಆ) ಸದ್ಯದ ಪರಿಸ್ಥಿತಿಯಲ್ಲಿ ಈ ನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯ.

ಇ) ಬಂದಿದೆ.

ಈ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ವೋಲ್ಟೇಜ್ ಪರಿಸ್ಥಿತಿಯನ್ನು ಸುಧಾರಿಸಲು ಮಂಡಳಿಯು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ಮಳ್ಳವಳ್ಳಿ ತಾಲ್ಲೂಕಿನ ಟಿ.ಕೆ.ಹಳ್ಳಿಯಲ್ಲಿ 220:66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಕೆಲಸವು ತ್ವರಿತಗತಿಯಲ್ಲಿ ಸಾಗುತ್ತಿದೆ.
2. ಮಂಡ್ಯ ತಾಲ್ಲೂಕಿನ ಬಸರಾಳು ಗ್ರಾಮದಲ್ಲಿ ಮತ್ತು ನಾಗಮಂಗಲ ತಾಲ್ಲೂಕಿನ ಬಾಲಗಂಗಾಧರನಗರ (ಬಿ.ಜಿ. ನಗರ)ದಲ್ಲಿ 66 ಕೆ.ವಿ. ಉಪ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಶ್ರೀರಂಗಪಟ್ಟಣದಲ್ಲೂ ಸಹಾ 66ಕೆ.ವಿ. ಉಪವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ.
3. ಪಾಂಡವಪುರ ಹಾಗೂ ಸುತ್ತಮುತ್ತಲ ಪ್ರದೇಶದ ವೋಲ್ಟೇಜ್ ಸುಧಾರಣೆಗಾಗಿ ಮೈಸೂರಿನ ಹೂಟಗಳ್ಳಿಯಿಂದ ಪಾಂಡವಪುರಕ್ಕೆ ಇನ್ನೊಂದು 66 ಕೆ.ವಿ. ಪ್ರಸರಣಾ ಲೈನನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ.
4. ವಿತರಣಾ ವ್ಯವಸ್ಥೆಯಲ್ಲಿ ಎಕ್ಸ್‌ಪ್ರೆಸ್ ಫೀಡರುಗಳನ್ನು ನಿರ್ಮಿಸುವುದು, ಕೆಪಾಸಿಟರ್ ಬ್ಯಾಂಕುಗಳನ್ನು ಅಳವಡಿಸುವುದು, ಮುಂತಾದ ವ್ಯವಸ್ಥೆ ಸುಧಾರಣಾ ಕ್ರಮಗಳನ್ನು ನಿರ್ವಹಿಸುವುದು.

ಮೈಸೂರು ಸಕ್ಕರೆ ಕಾರ್ಖಾನೆಯು ಆರ್ಥಿಕ ವರ್ಷದಲ್ಲಿ ಗಳಿಸಿದ ಲಾಭ

1581-ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು 1988-89 ಹಾಗೂ 1989-90 ಆರ್ಥಿಕ ವರ್ಷದಲ್ಲಿ ಗಳಿಸಿರುವ ಅಂದಾಜು ಲಾಭವೆಷ್ಟು?

ಆ) ಮಂಡ್ಯ ಜಿಲ್ಲೆಯ ಮೈಸೂರು ಸಕ್ಕರೆ ಕಾರ್ಖಾನೆಯ ರೈತರಿಗೆ ಈ ಜಿಲ್ಲೆಯ ಇತರ ಕಾರ್ಖಾನೆಗಳ ರೈತರಿಗೆ ಬೋನಸ್ ಹಣ ಸಂದಾಯವಾಗಿರುವ ಹಾಗೆ ಬೋನಸ್ ಸಂದಾಯ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಈ ತಾರತಮ್ಯವನ್ನು ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ) ಮೈಸೂರು ಸಕ್ಕರೆ ಕಾರ್ಖಾನೆಯನ್ನು ಸಹಕಾರಿ ಸಕ್ಕರೆ ಕಾರ್ಖಾನೆಯನ್ನಾಗಿ ಪರಿವರ್ತಿಸಬೇಕೆಂಬ ರೈತರ ಆಶಯದ ಬಗೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) 1988-89ರಲ್ಲಿ ರೂ. 243.65ಲಕ್ಷ ಲಾಭ

1989-90ರಲ್ಲಿ ಲೆಕ್ಕ ಪರಿಶೋಧನೆ ಇನ್ನೂ ಮುಕ್ತಾಯವಾಗಿಲ್ಲ.

ಆ) ಮೈಸೂರು ಸಕ್ಕರೆ ಕಾರ್ಖಾನೆಯು 1988-89 (18 ತಿಂಗಳ ಅವಧಿಗೆ)ರ ಸಾಲಿಗೆ ಮಾತ್ರ ಲಾಭ ಗಳಿಸಿದ್ದು, ಇನ್ನೂ ಸುಮಾರು 69.99 ಲಕ್ಷ ರೂ. ಗಳ ಹಿಂದಿನ ಕೂಡಿಟ್ಟ ಹಾನಿಯನ್ನು 1989-90ರ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋದನೆ ಇನ್ನೂ ಮುಗಿದಿಲ್ಲವಾದ್ದರಿಂದ ರೈತರಿಗೆ ಆ ಬೋನಸ್ ಹಣ ಪಾವತಿ ಬಗ್ಗೆ ಕ್ರಮ ಕೈಗೊಳ್ಳುವುದು ಸಾಧ್ಯವಾಗಿರುವುದಿಲ್ಲ.

ಇ) ಜಿಲ್ಲೆಯ ಇತರೆ ಕಾರ್ಖಾನೆಗಳು ಸತತವಾಗಿ ಲಾಭಗಳಿಸುತ್ತಿದ್ದು, ಮೈಸೂರು ಸಕ್ಕರೆ ಕಂಪೆನಿ ಕೇವಲ 1988-89ರ ಸಾಲಿಗೆ ಮಾತ್ರ ಲಾಭ ಗಳಿಸಿರುತ್ತದೆ. 1989-90ರ ಲೆಕ್ಕ ಪರಿಶೋಧನೆ ಆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ರಾಜ್ಯಸಚಿವ ಸಂಪುಟದ ಸದಸ್ಯರುಗಳ ಪ್ರವಾಸ ಭತ್ಯೆ

1418-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಚಿವರ ಸಂಪುಟದ ಸದಸ್ಯರುಗಳಲ್ಲಿ ಮುಖ್ಯ ಮಂತ್ರಿಗಳು ಸೇರಿದಂತೆ ಡಿಸೆಂಬರ್ 1990ರಿಂದ ಫೆಬ್ರವರಿ 28, 1991ರ ವರೆವಿಗೆ ಪಡೆದುಕೊಂಡಿರುವ ಟಿ.ಎ. ಮತ್ತು ಡಿ.ಎ. ಭತ್ಯೆಗಳ ಮೊತ್ತವೆಷ್ಟು (ಪ್ರತಿಯೊಬ್ಬ ಮಂತ್ರಿ ಮಂಡಲದ ಸದಸ್ಯರುಗಳ ಬಗ್ಗೆ ಪ್ರತ್ಯೇಕವಾಗಿ ತಿಂಗಳುವಾರು ವಿವರಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ಸಚಿವ ಸಂಪುಟದ ಎಲ್ಲಾ ಸದಸ್ಯರುಗಳು ಮಾಡಿರುವ ಪ್ರವಾಸ ಅಧಿಕೃತ ಪ್ರವಾಸವೇ ಅಥವಾ ಖಾಸಗಿ ಪ್ರವಾಸವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) :

ಅ) ರೂ.7,38,148.00

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಅಧಿಕೃತ ಪ್ರವಾಸಗಳು.

ಅನುಬಂಧ

ಕ್ರ. ಸಂ.	*ಸಚಿವರ ಹೆಸರು*	*ಡಿಸೆಂಬರ್ 1990*	*ಜನವರಿ 1991*	*ಫೆಬ್ರವರಿ 1991*
	ಶ್ರೀಯುತರು	ರೂ.ಗಳು	ರೂ.ಗಳು	ರೂ.ಗಳು
1.	ಬಿ. ಬಸವಲಿಂಗಪ್ಪ	16,608	5,138	11,765
2.	ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ	2,620	20,509	34,836.
3.	ಎಂ. ವೀರಪ್ಪ ಮೊಯಿಲಿ	23,304	22,501	47,092
4.	ವಿ. ಮುನಿಯಪ್ಪ	3,398	20,212	22,692
5.	ಎಸ್. ಬಂಗಾರಪ್ಪ	9,277	18,528	32,330
6.	ಬಿ. ಶಿವಣ್ಣ	6,779	16,048	—
7.	ನಜೀರ್ ಅಹ್ಮದ್	5,485	9,225	12,510